## ಇಲ್ಲಿಯವರೆಗೆ



ಈ ವ್ಯಕ್ತಿಗೆ ಮೂರು ಹೆಸರುಗಳು. ಮಿನ್ನಾಗು (ಮಿಡಿನಾಗರ), ಮಿಜ್ರಾಡಿನ್, ನಾಜಿಯಾ... ಹೀಗೆ. ಈತ ಒಂದು ರೀತಿಯಲ್ಲಿ ಒಸಾಮಾ ಬಿನ್ ಲಾಡೆನ್ ತರಹ. ದೇಶದಲ್ಲಿ ನಡೆಯುವ ಟೆರರಿಸ್ಟ್ ಚಟುವಟಿಕೆಗಳಲ್ಲಿ ಈತನ ಹಸ್ತ ಇದ್ದೇ ಇರುತ್ತದೆ. ಅಲ್ಲದೆ ಈತ ಬಲು ಚಾಲಾಕಿ ಕೂಡ. ದೇಶದ ತುಂಬ ಇವರ ಸಂಚಾರ. ಒಂದು ದಿನ ಕಾಶ್ಮೀರದಲ್ಲಿದ್ದರೆ ಇನ್ನೊಂದು ದಿನ ಕನ್ಯಾಕುಮಾರಿಯಲ್ಲಿರುತ್ತಾನೆ. ಈತನನ್ನು ಫೋನ್ ಮಾಡಿ ಟ್ರೇಸ್ ಮಾಡಬಹುದಲ್ಲವೇ ಎಂದು ಕಮಾಂಡರ್ ಕೃಷ್ಣ ಕೇಳುತ್ತಾನೆ. ಆದರೆ ಆತ ದಿನಕ್ಕೊಂದು ಮೊಬೈಲ್ ಬದಲಾಯಿಸುವುದರಿಂದ ಇದು ಸಾಧ್ಯವಿಲ್ಲದ ಮಾತು. ಆದರೆ ಇದೇ ಊರಿನಲ್ಲಿರುವ ಬೇಕರಿಯ ಮಾಲೀಕ ಖಾನ್ ಪೊಲೀಸರ ಇನ್‌ಫಾರ್ಮರ್ ರೀತಿಯಲ್ಲಿ ವರ್ತಿಸುತ್ತಾನೆ. ಮಿನ್ನಾಗುವಿನ ನಿಜವಾದ ಕಾರ್ಯಸ್ಥಳ ಪಾಕ್ ಆಕ್ರಮಿತ ಕಾಶ್ಮೀರದಲ್ಲಿರುತ್ತದೆ. ಆಫ್ಘಾನಿಸ್ತಾನದ ಮಧ್ಯಭಾಗದಲ್ಲಿರುವ ಗಿಲ್ಗಿಟ್ ನಗರದಿಂದಲೇ ಆತ ಇಡೀ ವಿಧ್ವಂಸಕ ಕೃತ್ಯಗಳನ್ನು ನಿಭಾಯಿಸುತ್ತಿರುತ್ತಾನೆ. ಮಿಜ್ರಾಡಿನ್‌ನ ನಿಜನಾಮ ರಿಯಾಜ್ ಹಸನ್. ಆತ ಇಸ್ಲಾಮಿಕ್ ಸ್ಟೇಟ್ ಜತೆ ಕೈಜೋಡಿಸುತ್ತಾನೆ. ಈ ರೀತಿ ಮಾಡಿದ ಒಂದೇ ವರ್ಷದಲ್ಲಿ ಕಾಶ್ಮೀರದಲ್ಲಿ ಟೆರರಿಸ್ಟ್ ಚಟುವಟಿಕೆ ಮೂರು ಪಟ್ಟು ಹೆಚ್ಚಾಗುತ್ತದೆ. ಗಿಲ್ಗಿಟ್ ನಗರದಲ್ಲಿ ಹರಿಯುವ ಹಿಂಜೂ ನದಿಯನ್ನು ನೋಡುತ್ತಾ ಆತ ಯೋಚಿಸುತ್ತಾನೆ. ಆ ಪೊಲೀಸ್ ಇನ್‌ಫಾರ್ಮರ್ ಆಂಧ್ರ ಮೂಲದವನು. ಇವನನ್ನು ಸದೆಬಡಿಯುವ ನಿಟ್ಟಿನಲ್ಲಿ ಯೋಚಿಸುತ್ತಾ ಕಠಿಣವಾದ ಸಾಗರ ದಾಟಿ ಭಾರತ ಪ್ರವೇಶಿಸುತ್ತಾನೆ ಮಿನ್ನಾಗು. ಇತ್ತ ಕಲ್ಯಾಣಿ ಕೃಷ್ಣನ ಮೇಲಿನ ಸುಂದರ ಕೃತಿಯನ್ನು ಆಲಾಪ ಮಾಡುತ್ತಾ ಹಾಡುತ್ತಿರುತ್ತಾಳೆ. ಆ ಸ್ವರ ಮಾಧುರ್ಯದ ಮೋಡಿಗೆ ಎಲ್ಲರೂ ತಲೆಬಾಗುತ್ತಾರೆ. ಕಲ್ಯಾಣಿ ಮಿಜ್ರಾಡಿನ್‌ಗೆ ಫೋನ್ ಮಾಡುತ್ತಾಳೆ. ಆತ ಮುಖ ಗಂಟು ಹಾಕಿ 'ರಾಂಗ್ ನಂಬರ್' ಎಂದು ಕಟ್ ಮಾಡಿದ್ದೇ ಹೊಸ ತಿರುವನ್ನು ಕಥೆ ಪಡೆದುಕೊಳ್ಳುತ್ತದೆ.

ಕೆಲಸ ಮಾಡುತ್ತ 'ಅಂತಿದ್ದಾರೆ ಸರ್, ಅಂದುಕೊಂಡಿದ್ದೇನೆ ಸರ್' ಎನ್ನುವ ಮಾತುಗಳನ್ನು ಬಳಸಬಾರದು' ಎಂದ ಚೀಫ್. ಉಳಿದ ಆಫೀಸರ್‌ಗಳು ತಲೆದೂಗಿದರು.

'ಖಾನ್ ಬರೀ ಇನ್ಫಾರ್ಮರ್ ಅಲ್ಲ, ನಾವು ಹೆಮ್ಮೆಪಡಬೇಕಾದ ಒಬ್ಬ ದೇಶಭಕ್ತ'

'ನಾವು ಹಾಗೆ ಅಂದೊಕೊಂಡಿದ್ದೇವೆ ಸರ್' ಎಂದನು ಸ್ವಾಮಿ, ಯಾರೋ ಫಕ್ಕನೆ ನಕ್ಕರು.

ಚೀಫ್ ಅವನ ಕಡೆ ಸಿಟ್ಟಿನಿಂದ ನೋಡಿ, ಮತ್ತೆ ಟಾಪಿಕ್‌ಗೆ ಬಂದರು. 'ಖಾನ್‌ಗೆ ಈ ರಾಜ್ಯವಿಡೀ ಇನ್‌ಫಾರ್ಮರ್‌ಗಳ ನೆಟ್‌ವರ್ಕ್ ಇದೆ. ಅವನು ಆಯೋಜಿಸಿದ ಪೋಗ್ರಾಂಗೆ ಅವರೆಲ್ಲ ಬರುತ್ತಾರೆಂದೂ, ಖಾನ್ ಜೊತೆ ಅವರನ್ನೆಲ್ಲಾ ಒಟ್ಟಿಗೆ ಸಾಯಿಸಬೇಕೆಂದೂ ಟೆರರಿಸ್ಟ್‌ಗಳು ಆಡಿಟೋರಿಯಂ ಬ್ಲಾಸ್ಟ್ ಮಾಡಿದರು. ಅವರು ತಿಳಿದಿದ್ದ ಹಾಗೆ ಇನ್‌ಫಾರ್ಮರ್‌ಗಳುಬಂದಿರಲಿಲ್ಲ. ಮತ್ತೊಂದು ಕಡೆ ಸತ್ತವರಲ್ಲಿ ಖಾನ್ ಇಲ್ಲ! ಅಂದರೆ... ಇನ್ಫಾರ್ಮರ್‌ಗಳ ಅಡ್ರೆಸ್ ತಿಳಿದುಕೊಳ್ಳುವುದಕ್ಕೆ ಟೆರರಿಸ್ಟ್‌ಗಳು ಅವನನ್ನು ಬಂಧಿಸಿದ್ದಾರೆ.!'

'ಟೆರರಿಸ್ಟ್‌ಗಳ ಟಾರ್ಚರ್ ಭಯಂಕರವಾಗಿರುತ್ತದೆ ಸರ್, ಅವನು ಬ್ರೇಕ್ ಆಗಿ ವಿವರಗಳನ್ನು ಹೇಳಿದರೆ ಕಷ್ಟ' ಎಂದನು ಇನ್ನೊಬ್ಬ ಆಫೀಸರ್.

'ನೋ ನೋ, ಖಾನ್ ಬ್ರೇಕ್ ಆಗುವುದಿಲ್ಲ. ಅಷ್ಟರೊಳಗೆ ನಾವು ಟೆರರಿಸ್ಟ್‌ಗಳ ಇಡೀ ಸೆಟಪ್ ಅನ್ನು ಬ್ರೇಕ್ ಮಾಡಬೇಕು.

***

'ಸೋ, ಮಕ್ಕಳು ಡ್ಯಾನ್ಸ್ ಮಾಡುತ್ತಿರುವಾಗ ಬ್ಲಾಸ್ಟ್ ಆಯಿತು. ಆನಂತರ ನಿನ್ನಪ್ಪ ಮಾಯವಾದರು, ಹೌದಾ?' ಪ್ರಶ್ನಿಸಿದನು ಕೃಷ್ಣ.

'ಹೌದು ಸರ್', ಎಂದಳು ಕಲ್ಯಾಣಿ.

'ಅಲ್ಲಿ ನಿಮ್ಮ ತಂದೆಯ ಅವಶೇಷಗಳೇನೂ ಸಿಗಲಿಲ್ಲ. ಅಂದರೆ... ಅರೆಸ್ಟ್‌ಗೆ ಹೆದರಿ ಓಡಿಹೋಗಿರಬಹುದು, ಇಲ್ಲವೇ ಆ ಟೆರರಿಸ್ಟ್‌ಗಳಿಗೆ ಕುಮ್ಮಕ್ಕು ಆಗಿರಬಹುದು'

'ಅಥವಾ ಟೆರರಿಸ್ಟ್‌ಗಳು ಅವರನ್ನು ತಮ್ಮ ಜೊತೆ ಕರೆದೊಯ್ದಿರಬಹುದು' ವಾಕ್ಯವನ್ನು ಪೂರ್ತಿ ಮಾಡಿದಳು ಕಲ್ಯಾಣಿ.

ಇಂಟರಾಗೇಷನ್ ಮಾಡುವಾಗ ಬೆದರಿ ತೊದಲುತ್ತ ಉತ್ತರ ಹೇಳುವವರನ್ನಲ್ಲದೆ ಈ ರೀತಿ ತಮಗೇ ಸಲಹೆ ಕೊಡುವವರನ್ನು ಕೃಷ್ಣ ಕಂಡಿರಲಿಲ್ಲ. ಇರಿಟೇಟ್ ಆಗಿ 'ಅವರು ನಿಮ್ಮ ತಂದೆಯನ್ನೇಕೆ ಕರೆದೊಯ್ಯುತ್ತಾರೆ?' ಎಂದನು.

'ನಮ್ಮ ತಂದೆ ಪೊಲೀಸ್ ಇನ್ಫಾರ್ಮರಾ?' ಎಂದನು.

'ಹೌದು, ಈ ವಿಷಯ ಈಗಲೂ ಪ್ರಕಟಿಸಬಾರದು, ಆದರೆ ಅವರ ಬಗ್ಗೆ ನಿಮ್ಮಲ್ಲಿರುವ ದುರ್ಭಾವನೆಯನ್ನು ಹೋಗಲಾಡಿಸುವುದಕ್ಕೆ ಹೇಳಿದೆ. ಈ ವಿಷಯ ನನಗೆ, ಅಪ್ಪಗೆ, ಆಂಟೀ ಟೆರರಿಸ್ಟ್ ಸ್ಕ್ವಾಡ್‌ನ ಸೀನಿಯರ್ ಆಫೀಸರ್‌ಗಳಿಗೆ ಬಿಟ್ಟರೆ ಇನ್ಯಾರಿಗೂ ಗೊತ್ತಿಲ್ಲ.

'ನಾನು ಕೂಡಾ ಸೀನಿಯರ್ ಸ್ಕ್ವಾಡ್ ಆಫೀಸರೇ...'

'ಸಾರಿ ಸರ್ ಸಬ್ ಇನ್ಸ್‌ಪೆಕ್ಟರ್ ಇರಬಹುದು ಅಂದುಕೊಂಡಿದ್ದೆ'

ಮಾತಿನಲ್ಲಿ ವ್ಯಂಗ್ಯವಿದೆಯೇ ಎಂದು ಅವಳ ಮುಖವನ್ನು ನೋಡಿದನು. ಬಹಳ ಅತ್ತಿದ್ದರಿಂದ ಅವಳ ಕಣ್ಣುಗಳು ಸ್ವಲ್ಪ ಬಾತಿದ್ದವು, ಮುಖದಲ್ಲಿ ವ್ಯಂಗ್ಯವೇನೂ ಕಾಣಿಸಲಿಲ್ಲ. ಸಹಾನುಭೂತಿಯಿಂದ ' ನಿಮ್ಮ ತಂದೆ ಬಗ್ಗೆ ನಿಮಗೆ ಬಹಳ ಪ್ರೀತಿ ಅಂದುಕೊಳ್ಳುತ್ತೇನೆ' ಎಂದನು.

'ಹೌದು. ಕೇವಲ ತಂದೆಯಷ್ಟೇ ಅಲ್ಲ. ಅವರು ನಿಜವಾದ ಭಾರತೀಯ ಸರ್'

ಹೆಸರು?

'ಖಾನ್ ಅಬ್ದುಲ್ ಗಫಾರ್ ಖಾನ್'

ಭೂಮಿ ಗಿರಗಿರನೆ ತಿರುಗಿದ ಅನುಭವವಾಯ್ತುವನಿಗೆ. ಹತ್ತು ಮಂದಿ ಅನುಮಾನಿತರ ಲಿಸ್ಟ್‌ನಲ್ಲಿ ಕೇವಲ 'ಖಾನ್' ಎಂದಿತ್ತು. ಚೀಫ್ ಖಾನ್ ಬಗ್ಗೆ ಒಳ್ಳೆಯ ಮಾತಾಡಿದ್ದು ನೆನಪಿತ್ತು. ಆದರೆ ರೊಟೀನ್ ಎನ್‌ಕ್ವೆರಿಯಲ್ಲಿ ಯಾವ ಸಂದೇಶವೂ ಬಂದಿರಲಿಲ್ಲ.

'ನಿಮ್ಮ ತಂದೆ ಬೇಕರಿ ಯಜಮಾನರೆ?'

'ಹೌದು'

'ಓ ಮೈ ಗಾಡ್... ಐಯಾಂ ಸಾರೀ. ತಪ್ಪು ನನ್ನದೇ! ಕೋಡ್‌ವರ್ಡ್ 'ನಾನು' ಮೊದಲೇ ಹೇಳಬಾರದಿತ್ತು. ಬಾಯ್ತುಪ್ಪಿನಿಂದ ಹೇಳಿ ಬಿಟ್ಟೆ' ಎಂದು ಪ್ರಾಮಾಣಿಕವಾದ ಗಿಲ್ಟ್‌ನೊಂದಿಗೆ.

ಅವಳು ಅರ್ಥವಾಗದವಳಂತೆ ನೋಡಿದಳು. ಅವನು ವಿವರಿಸಿದನು.

'ನಿಮ್ಮ ತಂದೆಗೂ–ನಮಗೂ ನಡುವೆ ಕೋಡ್ ವರ್ಡ್ ಇದೆ. ಫೋನ್‌ನಲ್ಲಿ ಆ ಮಾತು ಹೇಳಿಬಿಟ್ಟೆ. ಅವರು 'ರಾಂಗ್ ನಂಬರ್' ಎಂದು ಕಟ್ ಮಾಡಿದರು. ಬಹುಶಃ ಪಕ್ಕದಲ್ಲಿ ಯಾರೋ ಇದ್ದಿರಬಹುದು. ಛೇ! ... ನನ್ನಂತಹ ಸ್ಟುಪಿಡ್ ಇನ್ನೆಲ್ಲೂ ಇರಲಾರ'

'ಈ ದಿನದ ನಿಮ್ಮ ತಂದೆಯ ಪರಿಸ್ಥಿತಿಗೆ ನಾನೇ ಕಾರಣ' ಎಂಬ ವಿಚಾರ ಅವನಲ್ಲಿ ಕಾಣಿಸಿತು. ಆದರೆ ಸಮಸ್ಯೆ ಬಂದಾಗ ಬೇಕಾಗಿದ್ದು ವಿಚಾರವಲ್ಲ. ಆಲೋಚನೆ. ಸಮಸ್ಯೆಯನ್ನು ಹೇಗೆ ಪರಿಹರಿಸಬೇಕು ಎಂಬ ಯೋಜನೆ.

ಕಲ್ಯಾಣಿ ಏನೋ ಯೋಚಿಸಿ 'ಸಭೆ ನಡೆಯುವ ಹಿಂದಿನ ದಿನ ನಮ್ಮ ಮನೆಗೆ ಒಬ್ಬ ಅಂಕಲ್ ಬಂದರು. ಅವರು ನಮ್ಮ ದೇಶದ ಬಗ್ಗೆ ಏನೇನೋ ಮಾತನಾಡಿದರು. ಅದರ ಮಾರನೆ ದಿನವೇ ಬ್ಲಾಸ್ಟ್ ಆಗಿದ್ದು, ನಂತರ ನಮ್ಮ ತಂದೆ ಆ ಅಂಕಲ್ ಇಬ್ಬರೂ ಕಾಣಿಸುತ್ತಿಲ್ಲ. ನನಗೆ ಅವರ ಮೇಲೇ ಸಂದೇಹ ಇದೆ' ಎಂದಳು.